# ಶ್ರೇಷ್ಠ ಯುವ ಕೃಷಿಕ



ಶ್ರೀ ರವಿಗೌಡ ಶಿವನಗೌಡ ಪಾಟೀಲ್
ಸಾ : ಗುಂಡಗಟ್ಟಿ
ತಾ : ಹಿರೇಕೆರೂರು
ಜಿ : ಹಾವೇರಿ
☎: 8152037446

## ವಿಶೇಷ ಸಾಧನೆಗಳು

ಕೃಷಿಯನ್ನು ಲಾಭದಾಯವನ್ನಾಗಿ ಮಾಡಿಕೊಂಡು ಇತರರಿಗೆ ಮಾದರಿಯಾದ ರೈತರು ಬೆರಳೆಣಿಕೆಯಷ್ಟು ಮಾತ್ರ. ಇಂತಹ ಮಾದರಿ ರೈತರಲ್ಲಿ ಒಬ್ಬರು ಹಿರೇಕೆರೂರು ತಾಲ್ಲೂಕಿನ ಗುಂಡಗಟ್ಟಿ ಗ್ರಾಮದವರಾದ ಶ್ರೀ. ರವಿಗೌಡ ಶಿ. ಪಾಟೀಲ್‌ರವರು ತಮ್ಮ 11 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ ಹತ್ತಿ, ಗೋವಿನ ಜೋಳಗಳನ್ನು, ಶೇಂಗಾವನ್ನು ಲಾಭದಾಯಕವಾಗಿ ಬೆಳೆಯುವುದರ ಜೊತೆಗೆ ಹಸಿಮೆಣಸಿನಕಾಯಿ, ಸೌತೆ, ಟೊಮೆಟೋದಂತಹ ತರಕಾರಿ ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ. ನೀರಿನ ಸದ್ಬಳಕೆಗಾಗಿ ಕೃಷಿ ಹೊಂಡ ಹಾಗು ಮಳೆ ನೀರು ಕೊಯ್ಲು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡುವ ಇವರು ಎರೆಹುಳು ಗೊಬ್ಬರ ಹಾಗು ಜೀವಾಮೃತ ಘಟಕ ಸಹ ಹೊಂದಿದ್ದಾರೆ. ನೀರಾವರಿ ವ್ಯವಸ್ಥೆ ಜೊತೆಗೆ ಜೀವಾಮೃತ ಸಹ ಬೆಳೆಗಳಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಸಂಪೂರ್ಣವಾಗಿ ಕೃಷಿಯಲ್ಲಿ ತೊಡಗಿಸಿಕೊಂಡ ಇವರು ತೆಂಗಿನ ಗಿಡ ಹಾಗು ಸಾಗವಾನಿ ಗಿಡಗಳನ್ನು ಬದುಗಳ ಮೇಲೆ ಬಳೆಸಿದ್ದಾರೆ.



